ತಡೆಗಟ್ಟುವುದಕ್ಕೂ ಇದೆ. ಆದರೆ ಇಲ್ಲಿ programme officers ಇಲ್ಲದಿದ್ದ ಮೇಲೆ ನೀವು ಮಾಡುವುದು ಏನು? ಆದ್ದರಿಂದ ಸರ್ಕಾರ ಸೀರಿಯಸ್ ಆಗಿ National Programme implementation ಮಾಡುವಾಗ ಅದಕ್ಕೆ ಬೇಕಾದ Public Health Officers, programmer officersನ್ನು fill up ಮಾಡಬೇಕು. 14 ರಲ್ಲಿ ಎರಡೇ ಇರುವುದು.

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ಇದರ ಬಗ್ಗೆ ಸಲಹೆ ಕೊಟ್ಟಿರುವ ಎಲ್ಲಾ ಶಾಸಕರ ಸಭೆಯೊಂದನ್ನು ಕರೆದು ಈ ರೋಗವನ್ನು ಸಂಪೂರ್ಣವಾಗಿ ಯಾವ ರೀತಿಯಾಗಿ ತಡೆಗಟ್ಟಬಹುದು ಎಂಬುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಡಾ: ಬಗಲಿ ಸಾರ್ವಭೌಮ ಸಶಗೌಡ: ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಇದೆ. ಆಗ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಡಾ: ಬಗಲಿ ಸಾರ್ವಭೌಮ ಸಶಗೌಡ: ಮಾನ್ಯ ಅಧ್ಯಕ್ಷರೆ, Please listen to me, it is a self linden disease. Hence ನಾವು ಏನು ಮಾಡುತ್ತೇವೆಂದರೆ, ಇದರಿಂದ ಏನು ಸಿಂಪ್ಟಮ್ಸ್ ಬರುತ್ತವೆ, ಇದಕ್ಕೆ ಟ್ರೀಟ್ಮೆಂಟ್ ಇದೆ. It is very wrong to say that there is no treatment to chikungunya. chikungunya is self disease. There are sufficient drugs to treat is. There is no chance of the disease being grave.

ಡಾ: ಹೆಚ್.ಸಿ. ಮಹದೇವಪ್ಪ : ಡಾ: ಬಗಲಿಯವರು ಡಿ.ಹೆಚ್.ಓ. ಆಗಿದ್ದರು. Programme Officer ಆಗಿದ್ದರು. ಅವರು ಸಲಹೆ ಕೊಡಲಿ.

ಕೊಪ್ಪಳ ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ಮತ್ತು ನಂತರದ ವಸತಿ ಶಾಲೆಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	118 (278)
ಸದಸ್ಯರ ಹೆಸರು	:	ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
ವಿಷಯ	:	ವಸತಿ ಶಾಲೆಗಳು
ಸಚಿವರ ಹೆಸರು ಮತ್ತು ಪದನಾಮ	:	ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು)

ಅ ಕೊಪ್ಪಳ ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ಮತ್ತು ನಂತರದ ವಸತಿ ಶಾಲೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು):

1. ಸಮಾಜ ಕಲ್ಯಾಣ ಇಲಾಖೆ:

ಇಲಾಖಾವತಿಯಿಂದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ಶಾಲೆಗಳು ನಡೆಯುತ್ತಿರುವುದಿಲ್ಲ.

ಆದರೆ, 1ನೇ ತರಗತಿಯಿಂದ 5ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಕೊಪ್ಪಳ ಜಿಲ್ಲೆಯಲ್ಲಿ ಗಂಗಾವತಿ ತಾಲ್ಲೂಕಿನ ಗಂಗಾವತಿ ಟೌನಿನಲ್ಲಿ ಒಂದು ವಸತಿ ಶಾಲೆಯನ್ನು ನಡೆಸಲಾಗುತ್ತಿದೆ.

2. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ 36 ಮೆಟ್ರಿಕ್–ಪೂರ್ವ ಮತ್ತು 7 ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ತಾಲ್ಲೂಕು	ಮೆಟ್ರಿಕ್–ಪೂರ್ವ		ಮೆಟ್ರಿಕ್–ನಂತರ	
	ನಿಲಯಗಳ ಸಂಖ್ಯೆ	ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ	ನಿಲಯಗಳ ಸಂಖ್ಯೆ	ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ
ಕೊಪ್ಪಳ	8	460	2	125
ಕುಷ್ಟಗಿ	9	520	1	65
ಗಂಗಾವತಿ	7	395	2	125
ಯಲಬುರ್ಗಾ	12	690	2	125
ಒಟ್ಟು	**36**	**2065**	**7**	**440**

3. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಯಾವುದೇ ವಸತಿ ಶಾಲೆಗಳಿರುವುದಿಲ್ಲ.

ತಾಲ್ಲೂಕು	ವಸತಿ ಶಾಲೆಗಳ ಸಂಖ್ಯೆ
1. ಗಂಗಾವತಿ	3
2. ಯಲಬುರ್ಗಾ	5

4.

3. ಕೊಪ್ಪಳ	2
4. ಕುಷ್ಟಗಿ	2
ಒಟ್ಟು	12

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ:

ಕೊಪ್ಪಳ ಜಿಲ್ಲೆಗೆ 12 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮಂಜೂರಾಗಿರುತ್ತವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಆ ಸದರಿ ತಾಲ್ಲೂಕಿಗೆ ನೂತನವಾಗಿ ಮಂಜೂರಾಗಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

1. ಸಮಾಜ ಕಲ್ಯಾಣ ಇಲಾಖೆ:

ಈ ಇಲಾಖೆಯಿಂದ ಸದರಿ ತಾಲ್ಲೂಕಿಗೆ ನೂತನವಾಗಿ ವಸತಿ ಶಾಲೆಗಳನ್ನು ಮಂಜೂರು ಮಾಡಿರುವುದಿಲ್ಲ.

2. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಈ ಇಲಾಖೆಯಿಂದ ಹೊಸ ವಿದ್ಯಾರ್ಥಿನಿಲಯಗಳು ಮಂಜೂರಾಗಿರುವುದಿಲ್ಲ.

3. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ:

ಕೊಪ್ಪಳ ತಾಲ್ಲೂಕಿಗೆ ಈವರೆಗೆ ಒಂದು ಹಿಂದುಳಿದ ವರ್ಗಗಳ ಹಾಗೂ ಒಂದು ಅಲ್ಪಸಂಖ್ಯಾತರ ವಸತಿ ಶಾಲೆ ಒಟ್ಟು ಎರಡು ವಸತಿ ಶಾಲೆಗಳು ಮಂಜೂರಾಗಿರುತ್ತವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಉತ್ತರದಲ್ಲಿ ಇಲಾಖಾವತಿಯಿಂದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ಶಾಲೆಗಳು ನಡೆಯುತ್ತಿರುವುದಿಲ್ಲವೆಂದು ಹೇಳಿದ್ದಾರೆ. ಆ ಶಾಲೆಗಳನ್ನು ಈಗಲಾದರು ಪ್ರಾರಂಭ ಮಾಡುತ್ತೀರ ಎಂಬುದನ್ನು ಮಾನ್ಯ ಸಚಿವರಲ್ಲಿ ಕೇಳ ಬಯಸುತ್ತೇನೆ. ಎರಡನೆಯದು, ಅವರು ಜಿಲ್ಲಾವಾರು ಮೆಟ್ರಿಕ್ ಪೂರ್ವ ಮತ್ತು ನಂತರ ಎಷ್ಟು ಹಾಸ್ಟೆಲ್‌ಗಳು ಇವೆ ಎಂದು ವರದಿಯನ್ನು ಕೊಟ್ಟಿದ್ದಾರೆ. ಅಲ್ಲಿ 36 ಹಾಸ್ಟೆಲ್‌ಗಳಿದೆಯೆಂದು ಹೇಳಿದ್ದಾರೆ. ನಮ್ಮ ಭಾಗದಲ್ಲಿ ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಇಲ್ಲದಿರುವುದರಿಂದ ಉನ್ನತ ವ್ಯಾಸಂಗ ಮಾಡಲು ಆಗುತ್ತಿಲ್ಲ. ಈಗ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯವರು ಇದರ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಬಿ.ಸಿ.ಎಂ. ಅಧಿಕಾರಿಗಳೂ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಕೊಪ್ಪಳ ತಾಲ್ಲೂಕಿಗೆ

ಕಾಲೇಜು ಬಾಲಕಿಯರ ಮತ್ತು ಬಾಲಕರ ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳನ್ನು ಹೆಚ್ಚುವರಿಯಾಗಿ ಕೊಡುವುದಕ್ಕೆ ಅವರು ಬಯಸುತ್ತಾರೆಯೇ ಎಂದು ತಮ್ಮ ಮೂಲಕ ಅವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದ ಮೆಟ್ರಿಕ್ ಪೂರ್ವ ಮತ್ತು ನಂತರದ ಕೆಲವು ಹಾಸ್ಟೆಲ್ ಬಗ್ಗೆ ಪ್ರಸ್ತಾವನೆ ಬಂದಿದೆ. ಇದನ್ನು ಪರಶೀಲಿಸಿ ಆ ಕ್ಷೇತ್ರಕ್ಕೆ ಮಂಜೂರಾತಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಒಂದು ವರದಿಯನ್ನು ಕೊಟ್ಟಿದ್ದಾರೆ. ಡಾ: ನಂಜುಂಡಪ್ಪನವರು ಕೂಡ ಏನು ಹೇಳಿದ್ದಾರೆಂದರೆ ರಾಜ್ಯದಲ್ಲಿ ಸುಮಾರು 29 ಜಿಲ್ಲೆಗಳಲ್ಲಿ ಕಾಲೇಜು ಮಟ್ಟದ ಬಾಲಕಿಯರ ಹಾಗೂ ಬಾಲಕರ 58 ವಸತಿನಿಲಯವನ್ನು ಪ್ರಾರಂಭ ಮಾಡಬೇಕೆಂಬ ವರದಿ ಇದೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ತಿಳಿಸಬೇಕು.

ಶ್ರೀ ಡಿ. ಸುಧಾಕರ: ಈ ಬಾರಿ 175 ಬಿ.ಸಿ.ಎಂ. ಮಹಿಳಾ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. 15 ಎಸ್.ಟಿ. ಜನಾಂಗದವರಿಗೆ 100 ಎಸ್.ಸಿ. ಜನಾಂಗದ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭ ಮಾಡುತ್ತೇವೆ. ಅದರಲ್ಲಿ ಮಾನ್ಯ ಸದಸ್ಯರೇನು ಪ್ರಸ್ತಾವನೆಯನ್ನು ಕೇಳಿದ್ದಾರೆ ಅದನ್ನು ಇದರಲ್ಲಿ ಮಾಡಿಕೊಡಲು ಪರಿಶೀಲನೆ ಮಾಡುತ್ತೇನೆ.

ರಾಜ್ಯದಲ್ಲಿ ಸಾರ್ವಜನಿಕ ಕಟ್ಟಡಗಳಲ್ಲಿ ಧೂಮಪಾನ ನಿಷೇಧ ಮಾಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**119 (439)**
ಸದಸ್ಯರ ಹೆಸರು	:	**ಶ್ರೀ ಸೋಮಣ್ಣ. ವಿ. (ಗೋವಿಂದರಾಜ ನಗರ)**
ಉತ್ತರಿಸುವ ಸಚಿವರು	:	**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ರಾಜ್ಯದಲ್ಲಿ ಈಗ ಸಾರ್ವಜನಿಕ ಕಟ್ಟಡಗಳಲ್ಲಿ ಧೂಮಪಾನ ನಿಷೇಧ ಮಾಡಲಾಗಿದೆಯೇ:

ಹೌದು